ಇ) ಹೆಚ್ಚಿನ ಅಧಿಕಾರಿಗಳು ವರ್ಗಾವಣೆ ಪ್ರಯುಕ್ತ ಬೆಂಗಳೂರಿನಲ್ಲಿರುವುದೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

4341 (5380) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ. (ಬ್ರಹ್ಮಾವರ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಹೇರೋಹಳ್ಳಿ, ಗಿಡದಕೋನೇನಹಳ್ಳಿ ಮತ್ತು ಮಲ್ಲತ್ತಹಳ್ಳಿ ಗ್ರಾಮಗಳಿಗೆ ಸಂಬಂಧಿಸಿದ ಯಾವ್ಯಾವ ಸರ್ವೆ ನಂಬರುಗಳ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ "ಮುಂದುವರೆದ ಸರ್.ಎಂ.ವಿಶ್ವೇಶ್ವರಯ್ಯ ನಗರ" ಬಡಾವಣೆ ರಚಿಸುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ; (ಸರ್ವೆ ನಂಬರುಗಳ ವಿವರಗಳನ್ನು ಮತ್ತು ಭೂಸ್ವಾಧೀನಪಡಿಸಿಕೊಂಡ ದಿನಾಂಕವನ್ನು ನೀಡುವುದು);

ಆ) ಭೂಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಈಗಾಗಲೇ ನಿವೇಶನವನ್ನು ತೆಗೆದುಕೊಂಡು ಕೆಲವರು ನೋಂದಣಿ ಮಾಡಿಸಿದ್ದು ಮತ್ತೆ ಕೆಲವರು ಕೋರ್ಟಿನಲ್ಲಿ ಕಾಂಪ್ರೈಮೈಸಿಂಗ್ ಡಿಕ್ರಿ ಮಾಡಿಸಿಕೊಂಡಿದ್ದು, ಇವರುಗಳಿಗೆ ಬದಲಿ ನಿವೇಶನವನ್ನು ಸರ್ಕಾರವು ನೀಡುವುದೇ; ಸ್ಪಷ್ಟ ವಿವರಗಳನ್ನು ನೀಡುವುದು;

ಇ) ಬದಲಿ ನಿವೇಶನವನ್ನು ನೀಡುವುದಾದರೆ ನಿವೇಶನದ ಹಂಚಿಕೆ ಪ್ರಕ್ರಿಯೆ ಎಂದಿನಿಂದ ಪ್ರಾರಂಭಿಸಲಾಗುವುದು, 30 x 40 ಅಳತೆಗೆ ಎಷ್ಟು ದರವನ್ನು ನಿಗದಿ ಪಡಿಸಲಾಗುವುದು (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದುವರೆದ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯ ನಿರ್ಮಾಣಕ್ಕಾಗಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಹೇರೋಹಳ್ಳಿ, ಗಿಡದಕೋನೇನಹಳ್ಳಿ ಮತ್ತು ಮಲ್ಲತ್ತಹಳ್ಳಿ ಗ್ರಾಮದಲ್ಲಿ ಒಟ್ಟು 510 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ : 9/9/2003 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ ಹಾಗೂ ಈ ಪೈಕಿ 431 ಎಕರೆ 15

ಗುಂಟೆ ಜಮೀನಿಗೆ ಐತೀರ್ಪು ರಚಿಸಿ ಜಮೀನಿನ ಸ್ವಾಧೀನವನ್ನು ಪಡೆಯಲಾಗಿರುತ್ತದೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು).

ಆ) ರಿಟ್ ಅರ್ಜಿ ಸಂಖ್ಯೆ : 20875-938/01 ಇತ್ಯಾದಿಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ : 20/07/2001ರ ಆದೇಶದ ಹಿನ್ನೆಲೆಯಲ್ಲಿ ಮುಂದುವರಿದ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನಕ್ಕೆ ಒಳಪಟ್ಟಿರುವ ಜಮೀನಿನಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸುವ ಪೂರ್ವ ನಿವೇಶನವನ್ನು ಖರೀದಿಸಿರುವ ರೆವಿನ್ಯೂ ನಿವೇಶನದಾರರಿಗೆ 30x40 ಅಡಿ ಅಳತೆಯ ನಿವೇಶನವನ್ನು ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಾರ್ವಜನಿಕ ಪ್ರಕಟಣೆ ಹೊರಡಿಸಿ, ಅರ್ಜಿಗಳನ್ನು ಸ್ವೀಕರಿಸಿರುತ್ತದೆ.

ಇ) ನಿವೇಶನ ಹಂಚಿಕೆ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಅರ್ಜಿಗಳ ಪರಿಶೀಲನೆಯ ನಂತರ ಅರ್ಹ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಲು ಕ್ರಮ ಜರುಗಿಸಲಾಗುವುದು. 30x40 ಅಡಿ ನಿವೇಶನಕ್ಕೆ ಪ್ರಸ್ತುತ ಹಂಚಿಕೆ ದರವಾದ ಪ್ರತಿ ಚ.ಮೀ.ಗೆ ರೂ.2100-00 ರಂತೆ ಒಟ್ಟು ರೂ.2,27,300-00 ಪ್ರಾಧಿಕಾರವು ನಿಗದಿಪಡಿಸಿರುತ್ತದೆ. ಭೂಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ನಿವೇಶನಕ್ಕೆ ತಗಲುವ ಪರಿಹಾರ ಮೌಲ್ಯವನ್ನು ಕಳೆದು ಉಳಿದ ಹಣವನ್ನು ಅರ್ಜಿದಾರರಿಂದ ಪಡೆಯಲಾಗುವುದು.

4342 (4948) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) :- ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಕಾಮಗಾರಿಯ ಟೆಂಡರ್‌ನಲ್ಲಿ ರಿಂಗ್ ವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಿಂಗ್ ದಂಧೆಯ ಪೂರ್ಣ ಮಾಹಿತಿ ನೀಡುವುದು;

ಇ) ತುಂಗಾ ಮೇಲ್ದಂಡೆ ಕಾಮಗಾರಿಯ ಟೆಂಡರ್‌ನಲ್ಲಿ ರಿಂಗ್ ವ್ಯವಹಾರ ನಡೆದಿರುವುದರಿಂದ ಸರ್ಕಾರಕ್ಕೆ ಆಗಿರುವ ನಷ್ಟ ಎಷ್ಟು;

ಈ) ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?